DOC-312
T.P-2

(1)

51st Year of Publication ★ SATYAVADI Daily, MYSORE 4

Reg No B G 155 ಶ್ರೀ 3 - 6 - 1968

ಪ್ರಮುಖ ತಕ್ಷಣಮೂನಗಳಿಗೆ
ಆಕರ್ಷಣೀಯ' ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
'ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ

ಸ್ಥಳದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೆಯೆಚ್ಚ ಸೇರಿ ವರ್ಷಕ್ಕೆ ರೂ 16-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 6

Space available

For Permanent Advertisement

ಸ್ಥಾಪಕರು : ಅನುಮತಿ ಸಿದ್ಧೇಶ್ವರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್., ಕೃಷ್ಣರಾವ್ [2 ಪೈಸೆ

ರಾಜ್ಯದ ಅನೇಕ ಕಡೆಗಳಲ್ಲಿ ವರ್ತಕರ 3 ದಿನಗಳ ಹರತಾಳ

ಮೈಸೂರು ಪಲೇರಾ ಟಾಕೀಸ್ ಬಂ ಹಾಕಿರುವ ತಮ್ಮ ಸ್ವಂತ ಭವ್ಯ ಥಿಯೇಟರಿನಲ್ಲಿ ಪ್ರತಿ ದಿನ ಸಂಜೆ 6-30 ರಿಂದ 12-30 ರವರೆಗೆ

ವಿವಿಧ ವಿನೋದ Pastime & sports

ಸುಪ್ರಸಿದ್ಧ ನರ್ತಕಿಯರಿಂದ ವಿವಿಧ ತರದನೃತ್ಯಗಳು, ಹೈದರಾಬಾದಿನ ಸುಪ್ರಸಿದ್ಧ ಜಾದುಗಾರ ಶ್ರೀ ಎಲ್. ಎ. ಬಾಬು ಇವರಿಂದ ಅದ್ಭುತಮಯನಾದ ಇಂದ್ರಜಾಲಾಟ ನತೆಯುವ ಮಾತನಾಡುವ ಬೊಂಬೆ, ಎಲೆಕ್ಟ್ರಿಕ್ ಕುರ್ಚಿ. ಪ್ರವೇಶದರ 25 ಪೈಸೆ

"ಸತ್ಯವಾದಿ" ಯ ಸ್ವರ್ಣೋತ್ಸವ

"ಸತ್ಯವಾದಿ" ಯ ಸ್ವರ್ಣೋತ್ಸವವನ್ನು ಕ್ಷಿಪ್ರದಲ್ಲೇ ನೆರೆಸೇರಿಸಲಾಗುವುದು.

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀಮನ್ಮಹಾರಾಜರು, ಮತ್ತಿತರ ಗಣ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆವಂತೆಯೇ ಇಲ್ಲ.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನನೆರವನ್ನೂ ಆದರ ವಿಜ್ಞಾಪಗಳಿಂದ ನೀಡಿ ಸಹಕರಿಸಬೇಕಾಗಿ ವಿನಂತಿಸಿ, ಈಡೇರುವದೆಂದು ಆಶಿಸಿ, ಕೃತಜ್ಞತಾಪೂರ್ವಕವಂದಿಸುತ್ತೇವೆ.

ಸಂಪಾದಕ 'ಸತ್ಯವಾದಿ'
ಚಾಮರಾಜನಗರಂ, ಮೈಸೂರು 4.

ಪ್ರಾಣಿಗಳಿಗೆ ಕಷ್ಟಂ ಸುಂಕ

ಮೈಸೂರು— ಪಶ್ಚಿಮ ಜರ್ಮನಿಯಿಂದ ಮೈಸೂರು ಪ್ರಾಣಿಸಂಗ್ರಹಾಲಯಕ್ಕಾಗಿ ಒಂದು ಎರಡು ಮಹಿಳಾ ಟೈಪಿರ್‌ಗಳಿಗೆ ಕಷ್ಟಂ ಡ್ಯೂಟಿ ಕೊಡಬೇಕೆಂದು ಕೊಚ್ಚಿ ದೇವಿಯಲ್ಲಿ ನಿಲ್ಲಿಸಲ್ಪಟ್ಟಿದ್ದವು. ಡ್ಯೂಟಿ ರೂ. 4000 ಪಾವತಿಮಾಡಿ ನಿನ್ನೆ ಜೂಗೆ ತರಲ್ಪಟ್ಟವು.

ಭಾರತಕ್ಕೆ ನೆರವು

ವಾಷಿಂಗ್ಟನ್— ಭಾರತ ಸರಕಾರಕ್ಕೆ ರಫ್ತು—ಆಮದು ಬ್ಯಾಂಕು, ವಿವಿಧ ಯಂತ್ರಗಳು ಮುಂತಾದವನ್ನು ಕೊಳ್ಳಲು 20 ಮಿಲಿಯ ಡಾಲರು ಸಾಲಾ ನೀಡಿದೆ.

★

ಗಡಿಯಾರದ ಗಡಿಬಿಡಿ

ನವದೆಹಲಿ— ತಮ್ಮ ಹೊಸ ಗಡಿಯಾರ ಸ್ವಲ್ಪ ಸ್ಲೋ ಆದ್ದರಿಂದ ಕಾಂಗ್ರೆಸ್ಸು ಅಧ್ಯಕ್ಷ ಶ್ರೀ ನಿಜಲಿಂಗಪ್ಪನವರು ಏಐಸಿಸಿ ಮಾಟಿಂಗಿಗೆ 25 ನಿಮಿಷ ಲೇಟ್ ಆಗಿ ಬಂದರು — ಅವರಿಗೆ ಸೌದಿ ಅರೇಬಿಯಾ ರಾಜರು ಬಹುಮಾನಿಸಿದ್ದ ಚಿನ್ನದ ಗಡಿಯಾರವನ್ನು ಮೈಸೂರು ಮುಖ್ಯ ಮಂತ್ರಿ ಶ್ರೀ ವೀರೇಂದ್ರ ಪಾಟೀಲರಿಗೆ ಬಹುಮಾನಿಸಿದರು — ಅಧ್ಯಕ್ಷರಿಗೆ ನಾವು ಒಂದು ಹೊಸ ಗಡಿಯಾರ ಬಹುಮಾನಿಸೋಣ ಎಂದು ಸದಸ್ಯರು ಹೇಳಿದರು.

●

ಉಚಿತ ಆಹಾರ ಸಹಾಯ

ರಾಜಸ್ಥಾನದ ನಾಲಾ ಕೆಲಸಗಾರರು 12000 ಸಾವಿರ ಜನಕ್ಕೆ ಮೂರು ವರ್ಷಗಳ ಕಾಲ ಉಚಿತ ಆಹಾರ ಸಹಾಯ ನೀಡಲು ವಿಶ್ವಸಂಸ್ಥೆ ಆಹಾರ ಮತ್ತು ವ್ಯವಸಾಯ ಸಂಸ್ಥೆ ತಿಳಿಸಿದೆ — ಇದಕ್ಕೆ ರೂ. 5.52 ಕೋಟಿ ಆಗುವುದು.

ಮಂತ್ರಿಗಳ ಬದಲು ಕಂಪ್ಯೂಟರ್

ಜಲಂಧರ— ಕೇಂದ್ರ ಮತ್ತು ರಾಜ್ಯ ಸರಕಾರಗಳಲ್ಲಿ—ಮಂತ್ರಿಗಳ ಬದಲು ಕಂಪ್ಯೂಟರುಗಳನ್ನಿಡಬೇಕೆಂದು ಇಲ್ಲಿಯ ಒಂದು ಸಂಸ್ಥೆಯಲ್ಲಿ ಜನಸಂಘದ ಅಧ್ಯಕ್ಷ ಶ್ರೀ ವಾಜಪೇಯಿ ಹೇಳಿದರು — ಇದು ಮಂತ್ರಿಗಳಿಗಿ ತ ಖರ್ಚು ಕಡಮೆಯೆಂದೂ, ನಮ್ಮ ವಿವಿಧ ಸಮಸ್ಯೆ ಪರಿಹಾರಕ್ಕೆ ಸಹಾಯಕವಾಗುವುದೆಂದೂ ಹೇಳಿದರು.

★

ಮುಖ್ಯ ಮಂತ್ರಿಗಳಿಗೆ ಸನ್ಮಾನ

ಹಾಸನ— ಮುಖ್ಯ ಮಂತ್ರಿ ಶ್ರೀ ವೀರೇಂದ್ರ ಪಾಟೀಲರನ್ನೂ ಮತ್ತು ಹಾಸನ ಪ್ರತಿನಿಧಿ ಮಂತ್ರಿ ಶ್ರೀ ಲಕ್ಕಪ್ಪನವರನ್ನು ಸನ್ಮಾನಿಸಲು ಪೌರಸಭೆ ನಿರ್ಧರಿಸಿದೆ.

●

ಫಾದರ ಫರೇರ್ ದುಷ್ಕೃತ್ಯ

ಬೊಂಬಾಯಿ— ನಾಸಿಕ್‌ನಲ್ಲಿ ಫಾದರ್ ಫರೇರಿನ ಮಹಾರಾಷ್ಟ್ರ ಷೆತ್ಕಾರಿ ಸೇವಾ ಮಂಡಲಿಯ ಗೋಡೌನಿನ ಮೇಲೆ ಪೋಲೀಸರು ಧಾಳಿ ನಡೆಸಿ, ಅಲ್ಲಿ ಲೈಸೆನ್ಸು ಪ್ರಮಾಣಕಿಂತ ಹೆಚ್ಚು ಸ್ಫೋಟಪದಾರ್ಥ ಇರುವದನ್ನು ಪತ್ತೆಮಾಡಿದರು.

★

ಪೆನ್ಷನ್

ಬೆಂಗಳೂರು— ಕನಿಷ್ಟ ಪೆನ್ಷನ್ನನ್ನು ರೂ. 20 ರಿಂದ 30 ಕ್ಕೆ ಹೆಚ್ಚಿಸಲಾಗಿದೆ.

★

ಅಗ್ನಿ ಅನಾಹುತ

ಹರಡ್ಕಾ ಜೀವಲ್ಲಿಯ ಒಂದು ಗ್ರಾಮದಲ್ಲಿ ಮೆ 26 ರಂದು ಆದ ಅಗ್ನಿ ಅನಾಹುತದಿಂದ ಒಬ್ಬ ಹುಡುಗಿ ಜೀವಸಹಿತ ಸುಟ್ಟು ಹೋಗಿ, ರೂ. 1.40 ಲಕ್ಷ ಆಸ್ತಿಪಾಸ್ತಿ ಹಾಳಾಗಿ, 79 ಸಂಸಾರ ಮನೆಮಠವಿಲ್ಲದವರಾದರು.

3 ದಿನಗಳ ಹರತಾಳ

ಮೈಸೂರು, ಬೆಂಗಳೂರು, ಗುಲ್ಬರ್ಗ, ಬಿಜಾಪುರ, ತಿಪಟೂರು, ಡಾವಣಗೆರೆ, ಚಿಳಗಾಂ, ಹುಬ್ಬಿ ಮುಂತಾದ ಅನೇಕ ಕಡೆಗಳಲ್ಲಿ ಹೊಸ ವ್ಯವಸಾಯ ಉತ್ಪನ್ನ ಮಾರ್ಕಟಿಂಗು ಶಾಸನ ಪ್ರತಿಭಟಿಸಿ, ಇಂದಿನಿಂದ 3 ದಿನಗಳು ವರ್ತಕರು ಹರತಾಳ ಆಚರಿಸುವರು.

★

ತಿಂಡಿ ಬೆಲೆ ತಗ್ಗಿಸಲು

ಮೈಸೂರು— ಹೋಟಲ್ಲಿನವರು ತಿಂಡಿ ಬೆಲೆ ಇಳಿದಿದ್ದರೆ, ಈ ಬಗ್ಗೆ ಜನತೆಯ ಅಸಮಾಧಾನ ವ್ಯಕ್ತಪಡಿಸಲು ಹೋಟಲುಗಳ ಮುಂದೆ ಸತ್ಯಾಗ್ರಹ ನಡೆಸಲು ಏರ್ಪಡಿಸಲಾಗುತ್ತಿರುವದಾಗಿ ಫೌರಸಭಾ ವಿರೋಧ ನಾಯಕ ಶ್ರೀ ತಿಮ್ಮಯ್ಯ ಹೇಳಿರುವರು.

★

ಮೈಸೂರಿಗೆ ಸೇರಬೇಕು

ಆಂಧ್ರಪ್ರದೇಶದಲ್ಲಿರುವ ಮಡಕಾಸಿರವು ಮೈಸೂರಿಗೆ ಸೇರ್ಪಡೆಯಾಗಬೇಕೆಂದು ಕನ್ನಡ ಚಳವಳಿಗಾರರು ಯೋಜಿಸಿರುವರು — ಇದಕ್ಕಾಗಿ 10 ಮಂದಿ ಸ್ವಯಂಸೇವಕರ ತಂಡವು ಜೂ 8 ರಂದು ಮಡಕಾಸಿರದಲ್ಲಿ ಸತ್ಯಾಗ್ರಹ ನಡೆಸಲಿದೆ.

●

ದ್ವಿಭಾಷಾ-ಸೂತ್ರ

ಮದರಾಸು— ತಾವು ದ್ವಿಭಾಷಾ ನೀತಿಯ ಮೇಲೆ ಭದ್ರವಾಗಿ ಕುಳಿತಿರುವದಾಗಿ ಮುಖ್ಯ ಮಂತ್ರಿ ಅಣ್ಣಾ ದೊರೆ ಹೇಳಿದರು.

★

ಡಾ || ಮೋದಿ ನೇತ್ರ ಶಿಬಿರ

ಕಲ್ಲೀಕೋಟೆ—ಇಲ್ಲಿ ನಡೆಸಲಾದ ಡಾ|| ಮೋದಿಯವರ ನೇತ್ರ ಶಿಬಿರವು ಮೇ 29 ರಂದು ಸಮಯಪ್ತಿ ಗೊರಡಿತು. ; 577 ಆಪರೇಷನ್‌ಗಳು ನಡೆದವು.

ವುಡ್‌ಲಾಂಡ್ಸ್ ಜನವರಿಯು 5 ನೇ ವಾರ

.... ಸುಜೋಧ್ ಮುಖರ್ಜಿಯವರ ಈಸ್ಟ್‌ಮನ್ ಕಲರ್ ಹಿಂದಿ ಚಿತ್ರ ....

ಷಾಗಿರ್ದ್ Shagird

ತಾರಾಗಣ— ಜಾಯ್ ಮುಖರ್ಜಿ, ಸೈರಾಬಾನು, ನಾಜಿರ್ ಹುಸೇನ್
ಅಚ್ಚಲ ಸಚದೇವ್, ಐ. ಎಸ್. ಜೋಹರ್ [ದಿನ 3 ಪ್ರದರ್ಶನ]

ಅಮೋಘ 4ನೇ ವಾರ

.... ಅಮೋಘ ಕನ್ನಡ ಚಿತ್ರ ....

ಬೆಂಗಳೂರು ಮೇಲ್

ಪಾತ್ರ : ರಾಜಕುಮಾರ್ ನರಸಿಂಹರಾಜು ಕೊಟ್ಟಾರಕರ್
ಅಶ್ವತ್ ಜಯಂತಿ ವಿಜಯಲಲಿತ

Help The Gorakshana

ಗೋರಕ್ಷಣೆಗೆ ಬೆಂಬಲ ನೀಡಿ

— ಗೋರಕ್ಷಣಾ ವ್ಯವಸ್ಥಾಪಕರ ವಿನಂತಿ —

ಗೋರಕ್ಷಣೆಗೆ ಲೇಖನಗಳನ್ನೂ ಪ್ರೋತ್ಸಾಹ ಧನವನ್ನೂ
ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು

ಚಂದಾವಾಯಿದೆ ಕಳೆದಿರುವವರು ಇಮಂಡ್ಲಿ ಚಂದಾ ಪಾವತಿಮಾಡಬೇಕಾಗಿ ವಿನಂತಿ

ಡಾ|| ಪಿ ಎಸ್ ನಾರಾಯಣ್, ಶ್ರೀ ಪಿ.ಸಿ ವಿಶ್ವನಾಥ್ ಜಯನಗರ, ಬೆಂಗಳೂರು
ಶ್ರೀ ಬಿ ಜಿ. ಶಾಸ್ತ್ರಿಗಳು, 1030 ಎದತ್ಕಾಣ್ಣಪುರ, ಮೈಸೂರು
ಶ್ರೀ ಅನಂತನಂಸಿಂಹಯ್ಯಂಗಾರ್, ಶಾಸ್ತ್ರಧರ್ಮ ಪ್ರಚಾರಸಭಾ ಹೊಂಗನೂರ
ಗೋರಕ್ಷಣ ಆಫೀಸು ಸತ್ಯವಾದಿ ಪ್ರೆಸ್, ಚಾಮರಾಜಪುರಂ ಮೈಸೂರು 4
ವಿಳಾಸ— ಗೋರಕ್ಷಣ ಆಫೀಸು 1067 ಚಾಮರಾಜಪುರಂ, ಮೈಸೂರು

Golden Jubilee of 'Satyavadi'

The golden jubilee of the 'Satyavadi' is to be celebrated very soon.

The President, the Prime Minister, H.H. the Maharaja of Mysore, and other personages have extended messages of felicitations and good wishes. Sri Sringeri and Sri Dwaraka Jagadgurujis have favoured blessings and financial aid.

It is welknown that golden jubilee of newspapers in India is rare and almost unknown in Mysore State. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervently solicited with grateful thanks.

Editor, 'Satyavadi' Chamarajapuram, Mysore 4.

Edited, Printed & Published by Dharmapracharo Nirate M S Krishna Rao (Proprietor) at the Satyavadi Press Chamarajapuram, Mysoe 4

ಸಾಹಸ ಕೃತ್ಯ

ಜರ್ಮನಿಯ ಸ್ಕೆಲ್ಸ್‌ವಿಗ್‌ಹಾಲಸ್ಟೈನಿನ 27 ವರ್ಷದ ಎಡ್ಗರ್ಮಾ ಎಂಬ ಬಡಗಿಯು 601 ದಿನಗಳ ದಿನಗಳ ತನ್ನ 20 ಅಡಿಗಳ ಕ್ರಿಡಾ ನೌಕೆಯಲ್ಲಿ ವಿಶ್ವವನ್ನು ಸುತ್ತಿ ಬಂದಿರುವನು. ಮಧ್ಯೆಮಧ್ಯೆ ತನ್ನ ಖರ್ಚಿಗೆ ಅಲ್ಲಲ್ಲಿ ಮುರಗೆಲಸ ಮಾಡುತ್ತಿದ್ದನು. ಹೊರಟಾಗ ತನ್ನ ಜೊತೆಯಲ್ಲಿ 300 ಟಿನ್ ಮಾಂಸ ಮತ್ತು ತರಕಾರಿ, ಅಕ್ಕಿ, ಒಣಹಣ್ಣು, 100 ಪೌಂಡು ಈರುಳ್ಳಿ ತೆಗೆದುಕೊಂಡುಹೋದನು.

★

ಕುಡಕ ಡ್ರೈವರುಗಳಿಗೆ

ಜರ್ಮನಿಯಲ್ಲಿ ಕುಡಿದು ಮೋಟಾರು ನಡೆಸುವರಿಗೆ 1000 ಮಾರ್ಕುಗಳ ವರೆಗೆ ಜುಲ್ಮಾನೆ ಮತ್ತು ಮೋಟಾರು ನಡೆಸವದಕ್ಕೆ ಪ್ರತಿಬಂಧದ ಮಸೂದೆ ಬರಲಿದೆ

.....

ಪಾಕಿಸ್ತಾನದಲ್ಲಿಯ ಕಷ್ಟ

ಪಾಕಿಸ್ತಾನದಲ್ಲಿ ಅನುಭವಿಸಲಾರದ ಕಷ್ಟಕ್ಕೆ ಬಡಬಡಿಸುತ್ತಿರುವದನ್ನು ಸಹಿಸಹಿಸಲಾರದೆ, 15 ಮಂದಿ ಪಾಕಿಸ್ತಾನಿಗಳ ರಣವೀರಸಿಂಗ್‌ಪುರದ ಭಾಗದಲ್ಲಿ ಭಾರತಕ್ಕೆ ಬಂದು, ಪೋಲೀಸು ಸ್ಟೇಷ ಮುಂದೆ ಕಾಣಿಸಿಕೊಂಡು, ಪಾಕಿಸ್ತಾನದಲ್ಲಿ ಹಿಂದಿ ಜನರಿಗೆ ಆಗುತ್ತಿರು ಸಹಿಸಲಾರದ ಕಷ್ಟವನ್ನು ವಿವರಿಸಿದರು.

ಜಪಾನಿನಲ್ಲೂ ಅಸ್ಪೃಶ್ಯತೆ

ಜಪಾನಿನಲ್ಲಿ ಈಟಾ ಎಂಬ ಅಸ್ಪೃಶ್ಯ ಸಂಗಡ ಇರುವದೆಂದು ಡಾ|| ತಾಟ್ಟಿಯವರು ಹೇಳಿದ್ದಾರೆ.

ಆಶೋಕ ಮಿಡಿವೆನ್ಸೀಸ್

ಲಿವ್ಸ್‌ಡರ್ಸ್ ಬಿಲ್ಡಿಂಗ್ಸ್, ಮೈಸೂರು
ಎಲ್ಲ ವಿಧದ ಆಯುರ್ವೇದ ಔಷಧಗಳೂ ನಮ್ಮಲ್ಲಿ ದೊರೆಯುತ್ತವೆ

ಗೋವಧೆ ಕೂಡಲೆನಿಶೇಧವಾಗಲಿ

Cow Slaughter should be banned Immediately

SHAKTI SUDHA

A Superb Tonic

Protect the Cow

ಗೋರಕ್ಷಣೆ ಮುಖ್ಯ ಪ್ರಾಣಿದಯಾ ಕಾರ್ಯಗಳು ಹೆಚ್ಚಿಬೆಳೆಯಲಿ
ಶ್ರೀದಕ್ಷಿಣಾಮ್ನಾಯ ಶೃಂಗೇರಿ ಮಹಾಸಂಸ್ಥಾನಾಧೀಶ್ವರರಾದ ಶ್ರೀ ಶ್ರೀ ಶ್ರೀ ಭಾರತೀ ತೀರ್ಥ ಮಹಾಸ್ವಾಮಿಗಳವರು ಉಪದೇಶ ಆಶೀರ್ವಾದ ಪೂರ್ವಕವಾಗಿ ಕೊಟ್ಟಿರುವ ಸಂದೇಶ
ಕರ್ನಾಟಕದಲ್ಲಿ ಗೋರಕ್ಷಣೆ ಕಾರ್ಯಕ್ರಮ ತಾಲೂಕಾಹಾಗೂ, ಪಶುವೈದ್ಯ, ಪಟ್ಟಣಗಳ ವಿಶೇಷ ಪ್ರಚಾರ ಮಾಡುವುದಕ್ಕೆ ವಾರ್ಷಿಕ ಚಂದಾ 50 ಪೈಸೆ